# ಕರ್ನಾಟಕ ಸರ್ಕಾರ

## ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿ.ಇ/156/2015/ಎ.ಆರ್.ಇ-7

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560001.
ದಿನಾಂಕ: 31ನೇ ಜುಲೈ 2023.

### -:: ಶಿಫಾರಸ್ಸು ::-

ವಿಷಯ: ಆಪಾದಿತ ಸರ್ಕಾರಿ ನೌಕರರಾದ ಶ್ರೀ ಶರಣಪ್ಪ ಗುರುಲಿಂಗಪ್ಪ ಬಿರಾದಾರ, ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2) ಮೀನುಗಾರಿಕೆ ಇಲಾಖೆ, ಜಮಖಂಡಿ, ಬಾಗಲಕೋಟೆ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 20 ಮೀಇಸೇ 2015, ಬೆಂಗಳೂರು, ದಿನಾಂಕ: 24/02/2015.
(2) ಉಪಲೋಕಾಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ.ಉಪಲೋಕ್-1/ಡಿಇ/156/2015, ಬೆಂಗಳೂರು, ದಿನಾಂಕ: 25/03/2015.
(3) ಅಪರ ನಿಬಂಧಕರು ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 31/07/2023.

*****

ಸರ್ಕಾರದ ಆದೇಶ ದಿನಾಂಕ: 24/02/2015 ರಂತೆ ಶ್ರೀ ಶರಣಪ್ಪ ಗುರುಲಿಂಗಪ್ಪ ಬಿರಾದಾರ, ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2) ಮೀನುಗಾರಿಕೆ ಇಲಾಖೆ, ಜಮಖಂಡಿ, ಬಾಗಲಕೋಟೆ ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಅಂದರೆ

ಚಿಕ್ಕದಾಗಿ 'ಆ.ಸ.ನೌಕರರು' ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ:ಉಪಲೋಕ್-1/ಡಿಇ/156/2015, ಬೆಂಗಳೂರು, ದಿನಾಂಕ: 25/03/2015ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-7 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ ಶ್ರೀ ಶರಣಪ್ಪ ಗುರುಲಿಂಗಪ್ಪ ಬಿರಾದಾರ, ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2) ಮೀನುಗಾರಿಕೆ ಇಲಾಖೆ, ಜಮಖಂಡಿ, ಬಾಗಲಕೋಟೆ ಜಿಲ್ಲೆ ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

**:: ANNEXURE-I ::**

**:: CHARGE ::**

*That you DGO - Sri.Sharanappa Gurulingappa Biradara, Assistant Director of Fisheries (Grade-II), Fisheries Department, Jamakhandi Taluk, Bagalkote District while discharging your duties:*

*(a) Complainant's father namely, Sri.Mahadev Gopal Madar @ Maang was sanctioned Rs.60,000/- by Fisheries Directorate/Department for construction of a house under 'Mathyashraya' 5th Stage for the year 2011-12 under rehabilitation of Fishermen. After construction of house by his father, the Fisheries Department persons had inspected it and sent a cheque for Rs.60,000/- to the office of Assistant Director in Fisheries Department at Jamakhandi. As such, he along with his father went to said office on 12/9/2013 to have the said cheque and in that connection, when they enquired with you-DGO at the said office, you-DGO asked them to give Rs.8,000/- and take the cheque;*

*(b) For that, they told that amount to the said extent cannot be paid and requested to reduce it and come back. Thereafter as the work of bringing cheque was entrusted to the complainant, he approached Lokayukta Police on 16/9/2013 and thereafter approached you-DGO on the same day at your-DGO's office and made request for giving the cheque. Then also, you-DGO reiterated*

*your demand besides telling that for less than Rs.10,000/- you-DGO had not given cheque to others but as he happens to be Graduate, said amount has been reduced and asked to pay Rs.6,000/-;*

*(c) Not only that, on 17/9/2013, you-DGO had taken that tainted (bribe) amount (of Rs.6,000) at your office from the complainant in connection with the said work of giving cheque;*

*(d) Added to that, you-DGO failed to give any satisfactory reply or explanation or account for the said (tainted) bribe amount found then, when questioned by the I.O.;*

*(e) Thereafter, you-DGO was caught hold by the I.O. as you were found with the tainted (bribe) amount on said date at said place;*

*(f) Then the said tainted (bribe) amount was seized from you-DGO under a mahazar by the I.O. on said date in the presence of Panchas;*

*(g) Even there are statements of witnesses, including complainant, besides collected records and material filed by the I.O., which show your said repeated misconduct.*

*and thereby you failed to maintain absolute integrity and devotion to duty and committed an act which is unbecoming of Government Servant and thus you are guilty of misconduct under Rule 3(1)(i) to (iii) of KCS (Conduct) Rules 1966.*

4. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು–7), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ ಶ್ರೀ ಶರಣಪ್ಪ ಗುರುಲಿಂಗಪ್ಪ ಬಿರಾದಾರ, ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ–2) ಮೀನುಗಾರಿಕೆ ಇಲಾಖೆ, ಜಮಖಂಡಿ, ಬಾಗಲಕೋಟೆ ಜಿಲ್ಲೆ ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ವಿಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌಕರರ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ಐವರು ಸಾಕ್ಷಿಗಳನ್ನು ಅಂದರೆ ಪಿ.ಡಬ್ಲ್ಯೂ–1 ರಿಂದ ಪಿ.ಡಬ್ಲ್ಯೂ–5 ರವರುಗಳನ್ನು ವಿಚಾರಣೆಗೆ ಒಳಪಡಿಸಿ, ನಿಶಾನೆ ಪಿ–1 ರಿಂದ ಪಿ–10ರಂತೆ ದಾಖಲಾತಿಗಳನ್ನು

ಗುರುತಿಸಿರುತ್ತಾರೆ. ಆ.ಸ.ನೌಕರರ ಪರವಾಗಿ ಆ.ಸ.ನೌಕರರನ್ನು ಒಳಗೊಂಡು ಇನ್ನಿಬ್ಬರು ಸಾಕ್ಷಿಗಳು ಒಟ್ಟು ಮೂರು ಸಾಕ್ಷಿಗಳನ್ನು ಅಂದರೆ ಡಿ.ಬ್ಲ್ಯೂ-1 ರಿಂದ ಡಿ.ಬ್ಲ್ಯೂ-3 ರವರುಗಳನ್ನು ವಿಚಾರಣೆ ಒಳಪಡಿಸಿ, ನಿಶಾನೆ ಡಿ-1 ಮತ್ತು ಡಿ-2 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

6. ಆ.ಸ.ನೌಕರರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸಿ ಆ.ಸ.ನೌಕರರಾದ ಶ್ರೀ ಶರಣಪ್ಪ ಗುರುಲಿಂಗಪ್ಪ ಬಿರಾದಾರ, ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2) ಮೀನುಗಾರಿಕೆ ಇಲಾಖೆ, ಜಮಖಂಡಿ, ಬಾಗಲಕೋಟೆ ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪಗಳಿಂದ **'ದೋಷಮುಕ್ತಗೊಳಿಸಲು'** ಈ ಮೂಲಕ ಸರ್ಕಾರಕ್ಕೆ ಶಿಫಾರಸು ಮಾಡಿದೆ.

7. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

31/7/23

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
ಉಪಲೋಕಾಯುಕ್ತ-1,
ಕರ್ನಾಟಕ ರಾಜ್ಯ.